

بسم اللهِ الرّحمٰن الرّحيم

# ಯು.ಕೆ. ಜಲ್ಸಾ ಸಾಲಾನ: ಅತಿಥಿ ಸತ್ಕಾರದ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**14-08-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಮುಂದಿನ ವಾರದ ಜುಮುಅ ದಿನದಿಂದ ಬ್ರಿಟನಿನ ಜಲ್ಸಾ ಸಾಲಾನ ಆರಂಭವಾಗಲಿದೆ – ಇನ್‌ಶಾಅಲ್ಲಾಹ್. ಜಲ್ಸಕ್ಕೋಸ್ಕರ ಸಿದ್ಧತೆಗಳನ್ನು ಮಾಡಲು ಕೆಲವು ವಾರಗಳಿಂದ ಸ್ವಯಂ ಸೇವಕರಾದ ಕಾರ್ಯಕರ್ತರು ಹದೀಖತುಲ್ ಮಹ್‌ದಿಗೆ ಹೋಗುತ್ತಿದ್ದಾರೆ. ಕಳೆದ ಎಂಟು ಹತ್ತು ದಿನಗಳಿಂದ ಖುದ್ದಾಮ್ ಮತ್ತು ಇತರ ಕಾರ್ಯಕರ್ತರು ಬಹಳ ರಭಸದಿಂದ ಕೆಲಸ ಮಾಡುತ್ತಿದ್ದಾರೆ. ಕಾಡು ಗುಡ್ಡಗಳಲ್ಲಿ ಜಲ್ಸದ ವ್ಯವಸ್ಥೆ ಮಾಡುವುದು ಸಾಮಾನ್ಯ ಕೆಲಸವೇನೂ ಅಲ್ಲ. ಆದರೆ ಬ್ರಿಟನಿನ ವಿವಿಧ ಸ್ಥಳಗಳಿಂದ ಆಗಮಿಸುವ ಖುದ್ದಾಮ್ ಮತ್ತು ಸ್ವಯಂ ಸೇವಕರು ಎಷ್ಟು ನೈಪುಣ್ಯದಿಂದ ಈ ಕೆಲಸ ಮಾಡುತ್ತಾರೆಂದರೆ ಇಂತಹ ಉದಾಹರಣೆ ಲೋಕದಲ್ಲಿ ಬೇರೆ ಎಲ್ಲಿಯೂ ಕಾಣಿಸುವುದಿಲ್ಲ. ಯಾವುದೇ ಸಂಘಟನೆಯಲ್ಲಿ ಸಹ ನಾವು ಇಂತಹದನ್ನು ಕಾಣಲಾರೆವು.

ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ನಂತರ ಅಲ್ಲಾಹನು ಯುವಕರಲ್ಲೂ ಕಾರ್ಯಕರ್ತರಲ್ಲೂ ತನ್ನ ಅನುಗ್ರಹದಿಂದ ಉಂಟುಮಾಡಿದ ಮನೋಭಾವನೆಯಾಗಿದೆ. ಮಳೆಯಲ್ಲೂ ಬಿಸಿಲಿನಲ್ಲೂ ಈ ಯುವಕರು ಪರಿಸ್ಥಿತಿಯ ಬಗ್ಗೆ ನಿರ್ಲಕ್ಷ್ಯರಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಾರಂಭಿಸಿದ ಜಲ್ಸಕ್ಕೋಸ್ಕರ ಪ್ರತಿಯೊಂದು ಸಮಯದಲ್ಲಿ ನಿಸ್ವಾರ್ಥರಾಗಿ ಕೆಲಸ ಮಾಡಲು ಸಿದ್ಧರಾಗುತ್ತಾರೆ ಮತ್ತು ಕೆಲಸ ಮಾಡುತ್ತಾರೆ. ಜಲ್ಸದ ದಿನಗಳಲ್ಲಿ ಇನ್ನಷ್ಟು ಸಾವಿರಾರು ಕಾರ್ಯಕರ್ತರು ಅತಿಥಿಗಳ ಸೇವೆಗೋಸ್ಕರ ಮತ್ತು ಜಲ್ಸವನ್ನು ಸುವ್ಯವಸ್ಥಿತವಾಗಿ ಚಲಾಯಿಸಲು ತಮ್ಮ ಸೇವೆ ಅರ್ಪಿಸುತ್ತಾ ಆಗಮಿಸುವರು. ಜಲ್ಸದ ನಂತರ ಸಹ ಜಲ್ಸದ ಸಾಮಾಗ್ರಿಗಳನ್ನು ಸಂರಕ್ಷಿಸಲು ಮತ್ತು ಸಾಗಿಸಲು ಸಾಕಷ್ಟು ಕಾಲ ವಿನಿಯೋಗಿಸಬೇಕಾಗುತ್ತದೆ. ಈ ಎಲ್ಲ ಕೆಲಸ ಮಾಡುವವರಲ್ಲಿ ಇನ್‌ಶಾಅಲ್ಲಾಹ್ ಇಲ್ಲಿಗೆ ಆಗಮಿಸುವ ಪುರುಷರು, ಮಹಿಳೆಯರು, ಬಾಲಕರು, ಮತ್ತು ಬಾಲಿಕೆಯರು, ಮಕ್ಕಳು ಮತ್ತು ವೃದ್ಧರು ಎಲ್ಲಾ ಸೇರಿರುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸುವ ಈ ಅಸಾಧಾರಣ ಭಾವನೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ಥಾಪಿಸಿದ ಜಮಾಅತಿನಲ್ಲಿ ಹೊರತು ಬೇರೆಲ್ಲೂ ಕಾಣಿಸುವುದಿಲ್ಲ. ಈ ಪಶ್ಚಿಮದ ದೇಶಗಳಲ್ಲಿ ಧನ ಸಂಪಾದನೆ ಮಾಡುವುದು ಮತ್ತು ಲೌಕಿಕ ವ್ಯವಹಾರಗಳಲ್ಲಿ ಮಗ್ನರಾಗುವುದು ಪ್ರಥಮ ಕಾರ್ಯವಾಗಿರುತ್ತದೆ. ಇಂತಹ ದೇಶಗಳಲ್ಲಿ ಅಹ್ಮದಿ ಯುವಕರು ವಿನಯದಿಂದ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಾರೆ. ನಾವು ಈ ಕಾರ್ಯಕರ್ತರಿಗೋಸ್ಕರ ನಿರಂತರವಾಗಿ ಪ್ರಾರ್ಥಿಸುತ್ತಿರಬೇಕು. ಅತ್ಯುತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವ ಭಾಗ್ಯ ಅಲ್ಲಾಹನು ಅವರಿಗೆ ನೀಡಲಿ. ಅವರನ್ನು ಎಲ್ಲ ವಿಧಗಳ ಕಷ್ಟಗಳಿಂದಲೂ ವಿಪತ್ತುಗಳಿಂದಲೂ ಸಂರಕ್ಷಿಸಲಿ.

ನಾನು ಹಿಂದೆ ಅತಿಥಿ ಸತ್ಕಾರದ ಬಗ್ಗೆ ಹೇಳುತ್ತಿದ್ದ ಹಾಗೆ ಇಂದು ಸಹ ಕೆಲವು ಉಪದೇಶಗಳನ್ನು ಕಾರ್ಯಕರ್ತರಿಗೆ ನೀಡಬಯಸುತ್ತೇನೆ. ನಿಸ್ಸಂಶಯವಾಗಿ ಎಲ್ಲ ಕಾರ್ಯಕರ್ತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ತಮ್ಮ ಪೂರ್ಣ ಪ್ರಯತ್ನ ಮತ್ತು ಶ್ರದ್ಧೆಯಿಂದ ಸೇವೆ ಮಾಡುತ್ತಿದ್ದಾರೆ. ಆದರೆ ಕಾರ್ಯಕರ್ತರಲ್ಲಿ ಕೆಲವರು ಹೊಸದಾಗಿ ಸೇರುವವರಾಗಿದ್ದಾರೆ. ಹಳೆಯ ಕಾರ್ಯಕರ್ತರಿಗೆ ಸಹ ಅತಿಥಿ ಸತ್ಕಾರದ ಬಗ್ಗೆ ಇಸ್ಲಾಮೀ ಉಪದೇಶಗಳು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅತ್ಯುತ್ತಮ ಮಾದರಿ ಮತ್ತು ಅವರ ಸತ್ಯಸಂಧನಾದ ಸೇವಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಕೃತ್ಯಗಳಿಂದ ತೋರಿಸಿದ ಮಾದರಿ ಮತ್ತು ಅವರ ಉಪದೇಶಗಳನ್ನು ನೆನಪಿಸಿ ಕೊಡಬೇಕಾದ ಅಗತ್ಯವಿದೆ. ಅವರು ಅತ್ಯುತ್ತಮ ಮಟ್ಟದ ಸೇವೆ ಸಲ್ಲಿಸಬೇಕಾಗಿದೆ. ಅಲ್ಲಾಹನು ಅತಿಥಿ ಸತ್ಕಾರದ ಮಹತ್ವವನ್ನು ವಿವರಿಸುತ್ತಾ ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಅತಿಥಿಗಳನ್ನು ಸತ್ಕರಿಸಿದ ರೀತಿಯ ಬಗ್ಗೆ ಪ್ರಸ್ತಾಪಿಸಿದ್ದಾನೆ. ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರ ಬಳಿಗೆ ಅತಿಥಿಗಳು ಬಂದಾಗ ಅವರಿಗೆ ಸ್ವಾಗತ ನೀಡಿ ಶಾಂತಿಯನ್ನು ಕೋರಿದ ನಂತರ ತಕ್ಷಣ ಅವರು ಮಾಡಿದ ಕೆಲಸವೆಂದರೆ, ಅವರು ಅತಿಥಿಗಳಿಗೆ ಕೂಡಲೆ ಆಹಾರ ಸಿದ್ಧಪಡಿಸಿದರು. ಹಝ್ರತ್ ಲೂತ್ ಅಲೈಹಿಸ್ಸಲಾಮರ ಬಳಿಗೆ ಅತಿಥಿಗಳು ಆಗಮಿಸಿದಾಗ, ತನ್ನ ಸಮುದಾಯದ ಜನರು ಅವರಿಗೆ ಕಷ್ಟಕೊಡದಿರಲಿ ಎಂದು ಅತಿಥಿಗಳ ಸಂರಕ್ಷಣೆಯ ಚಿಂತೆ ಅವರನ್ನು ಬಾಧಿಸಿತು.

ಆದುದರಿಂದ ಅತಿಥಿಗಳಿಗೆ ಕಷ್ಟ ಉಂಟಾಗುವ ಬಗ್ಗೆ ಚಿಂತೆ ಇರಬೇಕಾಗಿದೆ. ಅತಿಥಿಗಳಿಗೆ ತೊಂದರೆ ಉಂಟಾದರೆ ಅದು ಆತಿಥೇಯರಿಗೆ ಅಪಮಾನಕರವಾಗುತ್ತದೆ. ಇದರ ಬಗ್ಗೆ ಸಹ ನಮಗೆ ಇದರಿಂದ ಪಾಠ ಲಭಿಸುತ್ತದೆ. ಆದುದರಿಂದ ಅತಿಥಿಗಳಿಗೆ ಸಂಭವಿಸುವ ಕಷ್ಟ ಒಂದು ಸಾಮಾನ್ಯ ಸಂಗತಿಯೆಂದು ಭಾವಿಸಬಾರದು. ಅತಿಥಿಗಳಿಗೆ ಕಷ್ಟ ಉಂಟಾದರೆ ಅದು ಆತಿಥೇಯರಿಗೆ ಅಪಮಾನಕರವಾಗುತ್ತದೆ.

ಆದುದರಿಂದ ಇಸ್ಲಾಮ್ ಅತಿಥಿಗಳನ್ನು ಗೌರವಿಸುವ ಬಗ್ಗೆ ಬಹಳಷ್ಟು ಉಪದೇಶ ನೀಡಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಹಝ್ರತ್ ಖದೀಜ ರಝಿಯಲ್ಲಾಹು ಅನ್‌ಹಾ ಕಂಡ ಅಸಾಧಾರಣ ಸದ್ಗುಣಗಳಲ್ಲಿ ಒಂದು ಅತಿಥಿ ಸತ್ಕಾರವಾಗಿತ್ತು. ಅವರು ಹೇಳಿದರು: ಅಲ್ಲಾಹನು ನಿಮ್ಮನ್ನು ಹೇಗೆ ತಾನೆ ಕೈ ಬಿಡುವನು. ನೀವು ಅತಿಥಿ ಸತ್ಕಾರದ ಗುಣವನ್ನು ಅತ್ಯುತ್ತಮ ಮಟ್ಟದಲ್ಲಿ ಹೊಂದಿರುವಿರಿ ಎಂದು ಹೇಳಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತದಲ್ಲಿ ಒಂದು, ಎರಡು, ಐದು, ಹತ್ತು ಅಲ್ಲ ನೂರಾರು ಉದಾಹರಣೆಗಳು ಹೇಗಿವೆ ಎಂದರೆ ಅತಿಥಿ ಸತ್ಕಾರದ ಅತ್ಯಂತ ಶ್ರೇಷ್ಠ ಮಟ್ಟವನ್ನು ಅವರು ಪ್ರಕಟಿಸಿದರು. ಅವರು ತಮ್ಮ ಶಿಷ್ಯರಿಗೂ ತಮ್ಮ ಅನುಯಾಯಿಗಳಿಗೂ ಈ ರೀತಿಯನ್ನು ಕಲಿಸಿದರು. ಸಹಾಬರಿಗೆ ಸಂಬಂಧಿಸಿ ಎಂತಹ ಘಟನೆಗಳು ವರದಿಯಾಗಿವೆ ಎಂದರೆ ಅವರು ಅಸಾಧಾರಣ ತ್ಯಾಗ ಮನೋಭಾವದಿಂದ ಅತಿಥಿ ಸೇವೆ ಮಾಡುತ್ತಿದ್ದುದನ್ನು ಕಂಡು ಆಶ್ಚರ್ಯಚಕಿತರಾಗುತ್ತೇವೆ. ಅಲ್ಲಾಹನು ಸಹ ಅವರ ಅತಿಥಿ ಸತ್ಕಾರವನ್ನು ಮೆಚ್ಚಿರುತ್ತಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕ್ರಮ ಹೇಗಿತ್ತೆಂದರೆ ಹೆಚ್ಚು ಅತಿಥಿಗಳು ಆಗಮಿಸಿದರೆ ಪ್ರತಿಯೊಬ್ಬ ಸಹಾಬಿಗೆ ಅತಿಥಿಗಳನ್ನು ಹಂಚುತ್ತಿದ್ದರು. ತಮ್ಮ ಪಾಲಿಗೆ ಬರುವ ಅತಿಥಿಗಳಿಗೆ ತಾವೇ ಸತ್ಕಾರ ನೀಡುತ್ತಿದ್ದರು. ಒಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ತುಹ್‌ಫ ಹೇಳುತ್ತಾರೆ: ಒಂದು ದಿವಸ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಾಲಿಗೆ ಬಂದ ಅತಿಥಿಗಳಲ್ಲಿ ನಾನು ಸಹ ಸೇರಿದ್ದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಮ್ಮನ್ನು ಮನೆಗೆ ಕರೆದುಕೊಂಡು ಹೋಗಿ ತಮ್ಮ ಪತ್ನಿ ಆಯಿಶಾ ರಝಿಯಲ್ಲಾಹು ಅನ್‌ಹರೊಂದಿಗೆ ತಿನ್ನಲು ಏನಾದರೂ ಇದೆಯೇ ಎಂದು ಕೇಳಿದರು. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದರು– ಸ್ವಲ್ಪ ಹರೀರ ಪಾಯಸ ಇದೆ. ಅದು ತಮಗೋಸ್ಕರ ನಾನು ಇರಿಸಿರುವೆನು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆ ದಿನ ಉಪವಾಸದಿಂದಿದ್ದರು. ಉಪವಾಸ ಇಫ್ತಾರ್‌ಗೋಸ್ಕರ ಆ ಹರೀರ ಮಾಡಲಾಗಿತ್ತು. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಆ ಹರೀರ ಒಂದು ಪಾತ್ರೆಗೆ ಹಾಕಿ ತಂದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದರಿಂದ ಸ್ವಲ್ಪ ತೆಗೆದು ತಿಂದು ಹೇಳಿದರು: ಬಿಸ್ಮಿಲ್ಲಾಹ್ ಉಚ್ಚರಿಸಿ ತಿನ್ನಿರಿ ಎಂದು. ನಾವು ಪಾತ್ರೆಯಲ್ಲಿರುವುದನ್ನು ನೋಡದೆ ತಿನ್ನುತ್ತಿದ್ದೆವು. ನಾವು ಹೊಟ್ಟೆ ತುಂಬಾ ತಿಂದೆವು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪಾತ್ರೆಯಿಂದ ಮೊದಲು ಸ್ವಲ್ಪ ತಿಂದದ್ದು ಅಥವಾ ಕೇವಲ ರುಚಿಸಿದ್ದು, ಪ್ರಾರ್ಥಿಸಿ ಆ ಆಹಾರದಲ್ಲಿ ಸಮೃದ್ಧಿ ಉಂಟಾಗಲಿಕ್ಕಾಗಿತ್ತು. ಅವರ ಪ್ರಾರ್ಥನೆಯ ಅನುಗ್ರಹದಿಂದ ಎಲ್ಲರ ಹೊಟ್ಟೆ ತುಂಬಿತು. ಇದೇ ರೀತಿ ಪ್ರಾರ್ಥನೆಯಿಂದಾಗಿ ಆಹಾರದಲ್ಲಿ ಅನುಗ್ರಹ ಉಂಟಾದ ಅನೇಕ ಸಂಭವಗಳು ಇವೆ. ಉಳಿಕೆಯಾದ ಆಹಾರದಲ್ಲಿ ಸ್ವಲ್ಪ ತಿಂದು ಪ್ರಾರ್ಥಿಸಿದಾಗ ಆಹಾರ ವರ್ಧಿಸಿ ಎಷ್ಟೋ ಜನರಿಗೆ ಹೊಟ್ಟೆ ತುಂಬಿತು.

ಕೆಲವು ಸಾರಿ ಅತಿಥಿಗಳು ತೊಂದರೆ ಕೊಡುವ ಪರಿಸ್ಥಿತಿ ಉಂಟಾಗುತ್ತದೆ. ಆತಿಥೇಯರ ಸಹನೆಯು ಮಿತಿಮೀರಿ ಹೋಗುತ್ತದೆ. ಇಂತಹ ಪರಿಸ್ಥಿತಿಗಳಲ್ಲೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಶ್ಚರ್ಯಕರವಾದ ರೀತಿಯಲ್ಲಿ ಅತ್ಯುತ್ತಮವಾಗಿ ವರ್ತಿಸಿ ಮಾದರಿಯಾದರು. ಇದರ ಪರಿಣಾಮವಾಗಿ ಸಹಾಬರು ಸಹ ತಮ್ಮ ಅತಿಥಿಗಳಿಗೋಸ್ಕರ ತ್ಯಾಗ ಭಾವನೆಯಿಂದ ವರ್ತಿಸಿದ ಮಾದರಿಗಳು ಕಾಣುತ್ತವೆ. ಒಂದು ಘಟನೆಯ ಬಗ್ಗೆ ಯಾವಾಗ ಓದಿದರೂ ಹೊಸ ರಸಾನುಭೂತಿ ಉಂಟಾಗುತ್ತದೆ. ಅದೆಂದರೆ, ಒಬ್ಬ ಸಹಾಬಿ ತನ್ನ ಅತಿಥಿಗೆ ಆಹಾರ ನೀಡಲು ತನ್ನ ಮಕ್ಕಳನ್ನು ಹಸಿದಿರುವಾಗಲೇ ನಿದ್ರಿಸುವಂತೆ ಮಾಡಿದರು. ತಾನು ಸಹ ಹಸಿವೆಯಿಂದಲೇ ಇದ್ದು ತನ್ನ ಅತಿಥಿಗೆ ಅದರ ಬಗ್ಗೆ ತಿಳಿಯದಿರಲು ಪ್ರಯತ್ನ ಮಾಡುತ್ತಾರೆ. ಮರುದಿನ ಬೆಳಿಗ್ಗೆ ಈ ಅನ್‌ಸಾರಿ (ಮದೀನದ ನಿವಾಸಿ) ಸಹಾಬಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಗುತ್ತಾ ಹೇಳಿದರು: ನೀವು ಉಪಾಯದಿಂದ ನಿಮ್ಮ ಅತಿಥಿಗೆ ಊಟ ನೀಡಿದುದನ್ನು ನೋಡಿ ಅಲ್ಲಾಹನು ಸಹ ನಕ್ಕನು ಎಂದು ಹೇಳಿದರು. ಈ ಅತಿಥಿ ಸತ್ಕಾರ ಅಲ್ಲಾಹನಿಗೆ ಎಷ್ಟು ಇಷ್ಟಕರವಾಯಿತೆಂದರೆ ಅವನು ಅದನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದನು. ಆ ಸಹಾಬಿಗಳು ತಮ್ಮ ಮೇಲೆ ಮತ್ತು ತಮ್ಮ ಮಕ್ಕಳ ಮೇಲೆ ಸಹ ಅತಿಥಿಗಳಿಗೆ ಆದ್ಯತೆ ನೀಡುತ್ತಿದ್ದರು. ಇಂತಹ ಜನರು ನಿಶ್ಚಯವಾಗಿಯೂ ಇಹ ಪರಲೋಕಗಳ ಅನುಗ್ರಹಗಳಿಗೆ ವಾರೀಸುದಾರರಾಗುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠ ಮಾದರಿಯಿಂದ ಪ್ರಭಾವಿತರಾಗಿ ಮತ್ತು ಅವರ ಉಪದೇಶಗಳ ಕಾರಣದಿಂದಲೇ ಈ ಭಾವನೆ ಸಹಾಬರಲ್ಲಿ ಉಂಟಾಯಿತು.

ಒಂದು ಹದೀಸ್‌ನಲ್ಲಿ ಹೀಗೆ ಹೇಳಲಾಗಿದೆ. "ಅಲ್ಲಾಹನನ್ನು ಮತ್ತು ಅಂತಿಮ ವಿಚಾರಣೆ ದಿನವನ್ನು ನಂಬುವವನು ಒಳ್ಳೆಯ ಮಾತು ಹೇಳಲಿ ಅಥವಾ ಮೌನವಾಗಿರಲಿ. ಅದೇ ರೀತಿ ಅಲ್ಲಾಹನನ್ನೂ ಅಂತಿಮ ವಿಚಾರಣೆ ದಿನವನ್ನೂ ನಂಬುವವನು ತನ್ನ ನೆರೆಹೊರೆಯವನಿಗೆ ಗೌರವ ನೀಡಬೇಕು. ಅಲ್ಲಾಹನನ್ನೂ ಅಂತಿಮ ವಿಚಾರಣೆಯ ದಿನವನ್ನೂ ನಂಬುವವನು ತನ್ನ ಅತಿಥಿಗಳನ್ನು ಗೌರವಿಸಬೇಕು." ಯಾರ ಮನೆಗಳಿಗೆ ಅತಿಥಿಗಳು ಆಗಮಿಸುತ್ತಾರೋ ಅವರು ರಾತ್ರಿ ಹೊತ್ತು ಹಾಳುಹರಟೆಗಳಲ್ಲಿ ಕಾಲಕಳೆಯದೆ ಹೆಚ್ಚು ಸಮಯ ಈ ದಿನಗಳಲ್ಲಿ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಸ್ಮರಣೆಯಲ್ಲಿ ನಿರತರಾಗಬೇಕು. ಒಳಿತುಗಳಿಗೆ ಸಂಬಂಧಿಸಿ ಮಾತನಾಡಬೇಕು. ಒಳಿತುಗಳನ್ನು ಕಲಿಸಬೇಕು. ತಮ್ಮ ವರ್ತನೆಗಳನ್ನೂ ತಮ್ಮ ಸ್ವಭಾವ ಗುಣಗಳನ್ನೂ ಉನ್ನತ

ಮಟ್ಟಕ್ಕೆ ಏರಿಸಬೇಕು. ರಾತ್ರಿ ಹೊತ್ತು ಅಥವಾ ಹಗಲು ಹೊತ್ತು ಯಾವಾಗಲಾದರೂ ಬಿಡುವು ದೊರೆತರೆ ಕುಳಿತುಕೊಂಡು ಅಲ್ಲಿ-ಇಲ್ಲಿನ ವಿಷಯಗಳ ಬಗ್ಗೆ ಹರಟೆ ಹೊಡೆಯುವುದಕ್ಕೆ ಬದಲಾಗಿ ಧಾರ್ಮಿಕ ವಿಷಯಗಳ ಬಗ್ಗೆ ಮಾತನಾಡಬೇಕು. ಅದು ಅತಿಥಿಗಳ ಮೇಲೆ ಪ್ರಭಾವ ಬೀರುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರುಗಳು ಈ ವಿಷಯ ಮನವರಿಕೆ ಮಾಡಿದ್ದರು. ಆಗಮಿಸಿದ ಪ್ರತಿನಿಧಿ ಸಂಘದ ಸದಸ್ಯರಿಗೆ ವಾಸಮಾಡಲು ಅತ್ಯುತ್ತಮ ವ್ಯವಸ್ಥೆ ಮಾಡಿದ್ದರು. ಅತ್ಯುತ್ತಮ ಆಹಾರ ನೀಡಿದರು. ಅವರಿಗೆ ಆಧ್ಯಾತ್ಮಿಕ ತರಬೇತಿ ನೀಡಲು ಪ್ರಯತ್ನಿಸಿದರು. ಅವರು ತಮ್ಮ ಊರಿಗೆ ಮರಳಿ ಹೋದಾಗ ತಮ್ಮ ಜನರಿಗೆ ಅತ್ಯುತ್ತಮ ರೀತಿಯಲ್ಲಿ ತರಬೇತಿ ನೀಡುವಂತೆ ಮತ್ತು ಇಸ್ಲಾಮಿನ ಸಂದೇಶ ತಮ್ಮ ಪ್ರದೇಶದ ಜನರಿಗೆ ತಲಪಿಸುವಂತೆ ಮಾಡಿದ್ದರು.

ನಮ್ಮ ಜಮಾಅತ್ ವ್ಯವಸ್ಥೆಯಲ್ಲಿ ಸಹ ತರಬೇತಿ ಮತ್ತು ಪ್ರಚಾರದ ವಿಭಾಗಗಳಿವೆ. ಜಲ್ಸದ ಕಾಲದಲ್ಲಿ ಈ ವಿಭಾಗಗಳ ಕಾರ್ಯಕರ್ತರ ತಂಡಗಳು ಕಾರ್ಯೋನ್ಮುಖವಾಗುತ್ತವೆ. ವಿವಿಧ ಜನಾಂಗಗಳ ಜೊತೆ ಮತ್ತು ವಿವಿಧ ವರ್ಗಗಳ ಜೊತೆ ನಡೆಸುವ ಸಭೆಗಳು ರಾತ್ರಿ ಕಾಲ ಜರಗುತ್ತವೆ. ನಮ್ಮವರಿಗೂ ಅನ್ಯರಿಗೂ ಆಧ್ಯಾತ್ಮಿಕವಾದ ಆಹಾರ ತಿನ್ನಿಸುವುದು ಸೇವಾ ನಿರತರಾದವರ ಜವಾಬ್ದಾರಿಯಾಗಿದೆ. ಇದರ ವ್ಯವಸ್ಥೆ ಸಹ ಅತ್ಯುತ್ತಮವಾಗಿ ಮಾಡಬೇಕಾಗಿದೆ. ಕಾರ್ಯಕರ್ತರು ನೆನಪಿಡ ಬೇಕಾದುದೇನೆಂದರೆ ಅವರ ವರ್ತನೆ ಮತ್ತು ಮಾತು ಸಹ ಉತ್ತಮ ಪಡಿಸುವುದು ಅತಿಥಿ ಸತ್ಕಾರದ ಭಾಗವಾಗಿದೆ. ಕೇವಲ ಸೇವೆ ಮಾಡಿದರೆ ಸಾಕಾಗಲಾರದು. ಈ ವಿಷಯಗಳ ಬಗ್ಗೆ ಸಹ ಗಮನ ಹರಿಸಬೇಕು. ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಸೇವಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅತಿಥಿ ಸತ್ಕಾರದ ಯಾವ ಮಾದರಿ ತೋರಿಸಿದರು ಮತ್ತು ತರಬೇತಿ ನೀಡಿದ್ದರು- ಅದರ ಕೆಲವು ಉದಾಹರಣೆಗಳನ್ನು ನಾನು ನೀಡುತ್ತೇನೆ.

ಅತಿಥಿಗೆ ಗೌರವ ನೀಡಿದ ಒಂದು ಘಟನೆ ಹೀಗಿದೆ: ಖಾದಿಯಾನಿಗೆ ಆಗಮಿಸಿದ ಒಬ್ಬ ಅತಿಥಿ ಬೈಅತ್ ಮಾಡಿದವರಾಗಿದ್ದರು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಗುರು-ಶಿಷ್ಯ ಭಾವನೆ ಇದ್ದುದರಿಂದ ಅವರು ತನ್ನ ಗುರುವಿನ ಪಾದಗಳನ್ನು ಒತ್ತುತ್ತಿದ್ದರು. ಇದೇ ಸಮಯದಲ್ಲಿ ಒಬ್ಬ ಹಿಂದೂ ಸ್ನೇಹಿತರು ಬಂದು ಬಾಗಿಲು ತಟ್ಟಿದರು. ಆಗ ಶಿಷ್ಯ ಬಾಗಿಲು ತೆರೆಯಲು ಎದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬೇಗನೆ ಎದ್ದು ಬಾಗಿಲು ತೆರೆದರು. ನೀವು ನಮ್ಮ ಅತಿಥಿಯಾಗಿರುವಿರಿ. ಅತಿಥಿಯನ್ನು ಗೌರವಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ ಎಂದು ಹೇಳಿದರು.

ನೋಡಿರಿ, ಇಲ್ಲಿ ಎರಡು ವಿಷಯಗಳಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಶಿಷ್ಯನ ಅಪೇಕ್ಷೆ ಪ್ರಕಾರ ತನ್ನ ಕಾಲು ಒತ್ತಲು ಅನುಮತಿ ನೀಡಿದರು. ಅದರ ಜೊತೆ ತಾನು ಅನುಸರಿಸುತ್ತಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶ ಪ್ರಕಾರ ತನ್ನ ಅತಿಥಿಗೆ ಗೌರವ ಸಹ ನೀಡಿದರು. ಅಲ್ಲದೆ ಬಾಗಿಲು ತಟ್ಟಿದ ಅತಿಥಿಗೆ ಸಹ ಗೌರವ ನೀಡುತ್ತಾ ಸ್ವತಃ ಬಾಗಿಲು ತೆರೆದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರು ಒಂದು ಘಟನೆ ವಿವರಿಸಿದ್ದಾರೆ. ಒಬ್ಬ ಸಭ್ಯ ಅಹ್ಮದಿ ಸೇಠಿ ಗುಲಾಮ್ ನಬಿ ಸಾಹೇಬರು ರಾವಲ್‌ಪಿಂಡಿಯಲ್ಲಿ ಅಂಗಡಿ ಇಟ್ಟಿದ್ದರು. ಅವರು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರೊಂದಿಗೆ ಹೀಗೆ ಹೇಳಿದರು: ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಲು ಖಾದಿಯಾನಿಗೆ ಹೋಗಿದ್ದೆ. ಚಳಿಗಾಲವಾಗಿತ್ತು ಮತ್ತು ಸ್ವಲ್ಪ ಮಳೆ ಸಹ ಸುರಿಯುತ್ತಿತ್ತು. ನಾನು ಸಾಯಂಕಾಲ ಖಾದಿಯಾನಿಗೆ ತಲಪಿದ್ದೆ. ರಾತ್ರಿ ಊಟ ಮಾಡಿ ಮಲಗಿದೆ. ತುಂಬಾ ಹೊತ್ತಿನ ನಂತರ ಯಾರೋ ನನ್ನ ಕೋಣೆಯ ಬಾಗಿಲು ತಟ್ಟಿದರು. ನಾನು ಬಾಗಿಲು ತೆರೆದು ನೋಡಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಂತಿದ್ದರು. ಅವರ ಒಂದು ಕೈಯಲ್ಲಿ ಬಿಸಿ ಹಾಲು ತುಂಬಿದ ಪಾತ್ರೆ ಇನ್ನೊಂದು ಕೈಯಲ್ಲಿ ಲಾಟೀನು ದೀಪ ಇತ್ತು. ನಾನು ಹುಝೂರ್‌ರನ್ನು ನೋಡಿ ಗಾಬರಿಗೊಂಡಾಗ ಅವರು ಪ್ರೀತಿಯಿಂದ ಹೇಳಿದರು: ಎಲ್ಲಿಂದಲೋ ಹಾಲು ತಂದಿದ್ದರು. ನಾನು ಅದನ್ನು ತಮಗೆ ನೀಡೋಣವೆಂದು ಬಯಸಿದೆ. ನೀವು ಕುಡಿಯಿರಿ. ಪ್ರಾಯಶಃ ತಮಗೆ ರಾತ್ರಿ ಹಾಲು ಕುಡಿಯುವ ಅಭ್ಯಾಸವಿರಬಹುದು ಎಂದು ಹೇಳಿದರು. ಸೇಠಿ ಸಾಹೇಬರು ಹೇಳುತ್ತಾರೆ: ನನ್ನ ಕಣ್ಣಲ್ಲಿ ನೀರು ತುಂಬಿತು. ಸುಬ್‌ಹಾನಲ್ಲಾಹ್, ಇದು ಎಂತಹ ಅಮೋಘ ಸ್ವಭಾವ ಗುಣವಾಗಿದೆ. ಅಲ್ಲಾಹನ ಮಸೀಹ್ ತನ್ನ ಸೇವಕರ ಸೇವೆ ಮಾಡುವುದರಲ್ಲಿ ಎಂತಹ ಅಭಿರುಚಿ ಹೊಂದಿದ್ದಾರೆ. ಮತ್ತು ಕಷ್ಟಪಡುತ್ತಿದ್ದಾರೆ ಎಂದು ನಾನು ಯೋಚಿಸಿದೆ.

ವಿಶಿಷ್ಟ ಪ್ರದೇಶಗಳಿಂದ ಆಗಮಿಸಿದ ಅತಿಥಿಗಳಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆವಶ್ಯಕತೆಗನುಸಾರವಾಗಿ ಆಹಾರ ಸಿದ್ಧ ಪಡಿಸುತ್ತಿದ್ದರು. ಆದರೆ ಜಲ್ಸದ ಕಾಲದಲ್ಲಿ ಒಂದೇ ರೀತಿಯ ಆಹಾರ ಸಿದ್ಧಪಡಿಸುತ್ತಿದ್ದರು. ಯಾರಿಗೂ ತೊಂದರೆಯಾಗದೆ ಆಹಾರ ಲಭಿಸಲಿ ಎಂಬುದು ಇದರ ಉದ್ದೇಶವಾಗಿತ್ತು. ಆದರೆ ಈಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಅಲ್ಲಾಹನ ಅನುಗ್ರಹದಿಂದ ವ್ಯವಸ್ಥೆ ಮಾಡುವುದರಲ್ಲಿ ಬಹಳ ಮುಂದೆ ಸಾಗಿದೆ. ಸ್ವಯಂಸೇವಕರು ಧಾರಾಳ ಇದ್ದಾರೆ. ಸಾಧನ ಸಂಪತ್ತು ಸಹ ವರ್ಧಿಸಿದೆ. ದೊಡ್ಡ ದೊಡ್ಡ ವ್ಯವಸ್ಥೆಗಳನ್ನು ಸುಲಭವಾಗಿ ಮಾಡಲು ಸಾಧ್ಯವಾಗುತ್ತದೆ. ಆದುದರಿಂದ ಜಲ್ಸದಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಲಭ್ಯವಾಗುವ ಒಂದು ಸಾಮಾನ್ಯ ಲಂಗರ್ ವ್ಯವಸ್ಥೆ ಇದೆ. ಆದರೆ ಅಹ್ಮದಿಯೇತರ ಅತಿಥಿಗಳಿಗೆ, ವಿಶಿಷ್ಟ ಪ್ರದೇಶದ ಜನರಿಗೆ ಮತ್ತು ರೋಗಿಗಳಿಗೆ ಬೇರೆ ಆಹಾರ ಸಿದ್ಧಪಡಿಸಲಾಗುತ್ತಿದೆ. ಇದರ ಬಗ್ಗೆ ಕಷ್ಟವೇನೂ ಆಗುವುದಿಲ್ಲ. ಆದರೆ ಕೆಲವರು ಬೇರೆ ಆಹಾರ ಸಿದ್ಧಪಡಿಸುವುದೇಕೆ ಎಂದು ಅನಾವಶ್ಯಕ ಪ್ರಶ್ನೆ ಕೇಳುತ್ತಾರೆ.

ಅಂತಹ ಜನರು ಸಹ ವಿಶಾಲ ಮನೋಭಾವ ಪ್ರದರ್ಶಿಸುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಒಮ್ಮೆ ಅತಿಥಿಗಳಿಗೆ ಸರಿಯಾಗಿ ಆಹಾರ ದೊರಕಲಿಲ್ಲ. ಲಂಗರಿನ ವ್ಯವಸ್ಥಾಪಕರು ಅತಿಥಿಗಳ ಬಗ್ಗೆ ಶ್ರದ್ಧೆ ನೀಡಲಿಲ್ಲ. ಅಲ್ಲಾಹನು ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ರಾತ್ರಿ ನನ್ನೊಂದಿಗೆ ಅಲ್ಲಾಹನು ಹೇಳಿದನು– ಲಂಗರಿನಲ್ಲಿ ತೋರಿಕೆಯ ವರ್ತನೆ ನಡೆಯಿತು. ಕೆಲವರಿಗೆ ಆಹಾರ ನೀಡಿದರು. ಬೇರೆ ಕೆಲವರಿಗೆ ನೀಡಲಿಲ್ಲ. ಅಲ್ಲಿನ ಕೆಲಸಗಾರರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು. ಈ ಕಾರಣದಿಂದ ಲಂಗರಿನ ಕೆಲಸಗಾರರನ್ನು ಆರು ತಿಂಗಳ ಕಾಲ ಕೆಲಸದಿಂದ ವಜಾಗೊಳಿಸಲಾಯಿತು. ಶಿಕ್ಷೆ ಸಹ ನೀಡಲಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮೃದು ಸ್ವಭಾವದವರಾಗಿದ್ದರು. ಆದರೆ ಅತಿಥಿ ಸತ್ಕಾರದ ಬಗ್ಗೆ ನಿರಾಸಕ್ತಿಯನ್ನು ಸಹಿಸಲು ಅವರಿಗೆ ಆಗಲಿಲ್ಲ. ಅವರು ಲಂಗರ್ ಖಾನದ ವ್ಯವಸ್ಥೆ ತನ್ನ ಮುಂದೆಯೇ ನಡೆಯುವಂತೆ ನೋಡಿಕೊಂಡರು.

ಆದುದರಿಂದ ಅತಿಥಿ ಸತ್ಕಾರದ ವ್ಯವಸ್ಥೆ ಮಾಡುವವರು ಬಹಳ ಜಾಗರೂಕರಾಗಿರಬೇಕಾದುದು ಆವಶ್ಯಕವಾಗಿದೆ. ಯಾರಿಗೂ ಎಲ್ಲಿಯೂ ಯಾವುದೇ ರೀತಿಯ ತೊಂದರೆ ಆಗಬಾರದು. ಜಲ್ಸದ ವ್ಯವಸ್ಥೆಗಳಲ್ಲಿ ಅತಿಥಿ ಸತ್ಕಾರ ವಿಭಾಗ ಒಂದು ಪ್ರಾಮುಖ್ಯ ವಿಭಾಗವಾಗಿದೆ. ಅನೇಕ ಏರ್ಪಾಡುಗಳು ಅತಿಥಿ ಸತ್ಕಾರಕ್ಕೋಸ್ಕರವೇ ಆಗಿವೆ. ಅತಿಥಿ ಸತ್ಕಾರದ ವ್ಯವಸ್ಥೆ ಸರಿಯಾದರೆ ಉಳಿದವು ತಾನಾಗಿಯೇ ಸರಿಯಾಗುತ್ತವೆ. ಅತಿಥಿಗಳಿಗೆ ವೈದ್ಯಕೀಯ ಸೇವೆಯ ಏರ್ಪಾಡು ಮಾಡುವುದು ಸಹ ಅತಿಥಿ ಸತ್ಕಾರ ವ್ಯವಸ್ಥೆಯಲ್ಲಿ ಸೇರಿದೆ. ಎಲ್ಲ ಕಾರ್ಯಕರ್ತರು ಗಮನ ಹರಿಸಬೇಕಾದುದೇನೆಂದರೆ, ಅತಿಥಿ ಸತ್ಕಾರವೆಂಬುದು ಆ ವಿಭಾಗದ ಬ್ಯಾಡ್ಜ್ ಧರಿಸಿದವರ ಮಾತ್ರ ಕೆಲಸವಲ್ಲ. ಹೆಚ್ಚು ಕಮ್ಮಿ ಪ್ರತಿಯೊಂದು ವಿಭಾಗವೂ ಅತಿಥಿ ಸತ್ಕಾರದ ವಿಭಾಗವೇ ಆಗಿದೆ. ಅತಿಥಿಗಳಿಗೆ ಸೌಲಭ್ಯ ಒದಗಿಸುವುದು, ಅವರಿಗೆ ಗೌರವ ನೀಡುವುದು, ಎಲ್ಲಾ ರೀತಿಯ ಕಷ್ಟಗಳಿಂದ ಅವರನ್ನು ರಕ್ಷಿಸುವುದು, ಪ್ರತಿಯೊಬ್ಬ ಕಾರ್ಯಕರ್ತನಿಗೆ ಕಡ್ಡಾಯವಾಗಿದೆ. ಅಲ್ಲಾಹನು ಎಲ್ಲಾ ಕಾರ್ಯಕರ್ತರಿಗೂ ಅತ್ಯುತ್ತಮ ರೀತಿಯಲ್ಲಿ ತಮ್ಮ ಕಾರ್ಯ ನಿರ್ವಹಿಸುವ ಭಾಗ್ಯ ದಯಪಾಲಿಸಲಿ. ಜಲ್ಸ ಸಹ ಎಲ್ಲಾ ರೀತಿಗಳಲ್ಲೂ ಅನುಗ್ರಹ ಭರಿತವಾಗಲಿ – ಆಮೀನ್.

[ಖುತ್‌ಬದ ಕೊನೆಗೆ ಹುಝೂರ್ ಕಮಾಲ್ ಆಫ್ತಾಬ್ ಸಾಹೇಬ್ (ರಫೀಕ್ ಆಫ್ತಾಬ್ ಸಾಹೇಬರ ಪುತ್ರ) 7–8–2015ರಂದು ಮೃತರಾದ ಬಗ್ಗೆ ತಿಳಿಸಿ ಅವರು ಜಮಾಅತಿಗೆ ಮಾಡಿದ ಸೇವೆಗಳನ್ನು ವಿವರಿಸಿದರು. إِنَّا لِلّٰهِ وَإِنَّا إِلَيْهِ رَاجِعُونَ. ಅವರು ಹಝ್ರತ್ ಸೇಠ್ ಅಲ್ಲಾದತ್ತಾ ಸಾಹೇಬ್ (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ) ಅವರ ಮರಿಮೊಮ್ಮಗನಾಗಿದ್ದರು.

ಅದೇ ರೀತಿ, ಮುಹಮ್ಮದ್ ನಈಮ್ ಆವಾನ್ ಸಾಹೇಬ್ (ಜರ್ಮನಿಯ ಮುಶ್ತಾಖ್ ಆವಾನ್ ಸಾಹೇಬರ ಪುತ್ರ) ಜರ್ಮನಿಯಲ್ಲಿ ರೈನ್ ನದಿಯಲ್ಲಿ ಮುಳುಗಿ ಮೃತರಾದರು. ಅವರೊಂದಿಗೆ ಅವರ ಹನ್ನೆರಡು ವರ್ಷ ಪ್ರಾಯದ ಮಗನೂ ಮುಳುಗಿ ಮೃತನಾದನು. إِنَّا لِلّٰهِ وَإِنَّا إِلَيْهِ رَاجِعُونَ. ಇವರೆಲ್ಲರ ನಮಾಝೆ ಜನಾಝ ಗಾಯಿಬ್ ಅನುಷ್ಠಿಸುವುದಾಗಿ ಹುಜೂರರು ಪ್ರಕಟಿಸಿದರು.]

-----------------*****-----------------

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 14-08-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon